ಮಾಡಿಕೊಡಬೇಕು. ಎಲ್ಲರಿಗೂ ಅವಕಾಶ ಸಿಗಬೇಕು, ಅವಕಾಶ ಸಿಕ್ಕರೆ ತಾನೆ, ಅವರಿಗೆ ಅನುಕೂಲ ಸಿಗುವುದು?

ಶ್ರೀ ಕೆ. ಹೆಚ್. ರಂಗನಾಥ್. ಕಾಸರಗೋಡಿನವರು ಏನೂ ದಡ್ಡರಲ್ಲ ಪ್ರಶ್ನೆ ಅದಲ್ಲ. ೧೯೭೧ನೇ ಇಸವಿಯಲ್ಲಿ ಈ ಸರ್ಕಾರದ ಆರ್ಡರ್ ಬಂದಿದೆ, ಅದನ್ನು ಪರಿಶೀಲನೆ ಮಾಡಿಸುತ್ತೇನೆ. ಅದನ್ನು ನೋಡೋಣ ಹಾಗೆ ಎಂದು ನಾನು ಹೇಳಿದೆ.

ಹಾಸನ ಜಿಲ್ಲೆ ಸಾರ್ವಜನಿಕ ಶಿಕ್ಷಣ ಉಪನಿರ್ದೇಶಕರು ಮಾಡಿದ ಪ್ರಾಥಮಿಕ ಶಿಕ್ಷಕರ ವರ್ಗಾವಣೆ ಪಟ್ಟಿಗೆ ಹಾಸನ ಜಿಲ್ಲಾ ಪರಿಷತ್ ಅಧ್ಯಕ್ಷರು ದಿನಾಂಕ ೧ನೇ ಜೂನ್ ೧೯೯೦ ರಂದು ತಡೆಯಾಜ್ಞೆ ನೀಡಿರುವ ಬಗ್ಗೆ

SRI K. H. HANUME GOWDA.—Sir, I call the attention of the Minister for Education, Youth Services, Kannada and Culture to the situation arised due to issue of stay order on 31st May 1990 by the President, Hassan Zilla Parishat on the transfer orders issued by the Educational Officer.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ವಿದ್ಯಾ ಸಚಿವರಲ್ಲಿ ಒಂದು ಮನವಿ. ಇಲ್ಲಿ ಏನು ಆಗಿದೆ ಎಂದರೆ ಆ ವಿದ್ಯಾರ್ಥಿಗಳ ಮನಸ್ಸಿಗೆ ಬಹಳ ನೋವು ಆಗಿದೆ. ವಿದ್ಯಾ ಇಲಾಖೆಯ ಸಚಿವರು ಇವರಿಗೆ ಏನಾದರೂ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಅವರ ಪ್ರವೇಶಕ್ಕೆ ಬಹಳ ತೊಂದರೆಯಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಇದನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದೇನೆ. ಬಹಳ ದಿವಸ ತೆಗೆದುಕೊಳ್ಳುವುದಿಲ್ಲ. ನಾನು ಆಫೀಸಿಗೆ ಹೋದ ಕೂಡಲೇ ...

ಶ್ರೀ ವಾಟಾಳ್ ನಾಗರಾಜ್.—ತಾವು ಮಾಡಲಾರಿರಿ ಎಂಬ ಭಾವನೆಯಿಂದ ನಾನು ಹೇಳಲಿಲ್ಲ. ಕೂಡಲೇ ತಾವು ಕ್ರಮ ತೆಗೆದುಕೊಳ್ಳಲಿಲ್ಲ ಎಂದರೆ ಅವರಿಗೆ ಬೇರೆ ಕಾಲೇಜುಗಳಲ್ಲಿ ಪ್ರವೇಶ ಸಿಗುವುದಿಲ್ಲ, ಆ ಪ್ರಶ್ನೆ ಸಹ ಬರುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಅಧಿಕಾರಿಗಳ ಜೊತೆ ಪ್ರಸ್ತಾಪ ಮಾಡದೇ ತತ್‌ಕ್ಷಣಕ್ಕೆ ಹೇಳತಕ್ಕದ್ದು ಸಮಂಜಸ ಅಲ್ಲ. ನಾನು ವಿಚಾರಿಸುತ್ತೇನೆ, ನೋಡುತ್ತೇನೆ ಎಂದು ಹೇಳಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ನಾಳೆ ಅಥವಾ ನಾಡಿದ್ದು ಪರಿಶೀಲನೆ ಮಾಡಿ ತಮ್ಮ ನಿರ್ಧಾರವನ್ನು ಪ್ರಕಟಪಡಿಸಿ.

ಶ್ರೀ ಕೆ. ಹೆಚ್. ರಂಗನಾಥ್.—ಆಗಲಿ.

ಉಪಾಧ್ಯಕ್ಷರು.—ಶ್ರೀ ಹನುಮೇಗೌಡರು ತಮ್ಮ ಗಮನ ಸೆಳೆದಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಹನುಮೇಗೌಡರು ಇಂಗ್ಲೀಷ್‌ನಲ್ಲಿ ಗಮನ ಸೆಳೆದಿದ್ದಾರೆ. ಅವರಿಗೆ ಇಂಗ್ಲೀಷ್‌ನಲ್ಲಿ ಉತ್ತರ ಹೇಳಬೇಕೋ ಅಥವಾ ಕನ್ನಡದಲ್ಲಿ ಹೇಳಬೇಕೋ?

ಶ್ರೀ ವಾಟಾಳ್ ನಾಗರಾಜ್.—ಕನ್ನಡದಲ್ಲಿಯೇ ಉತ್ತರ ಹೇಳಿ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು).—ಮಾನ್ಯ ಉಪಾಧ್ಯಕ್ಷರೇ, ಜಿಲ್ಲಾ ಪರಿಷತ್ತುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 'ಸಿ' ಮತ್ತು 'ಡಿ' ಗುಂಪಿಗೆ ಸೇರಿದ ನೌಕರರನ್ನು ವರ್ಗಾವಣೆ ಮಾಡುವ ಅಧಿಕಾರವು ಸಂಬಂಧಪಟ್ಟ ಜಿಲ್ಲಾ ಪರಿಷತ್ತಿಗೆ ಇದ್ದಿತು. ದಿನಾಂಕ ೨೪ನೇ ಮೇ ೧೯೯೦ ರಂದು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯವು ಅಧಿಕೃತ ಜ್ಞಾಪನ ಸಂಖ್ಯೆ ಆರ್‌ಡಿಪಿಆರ್ ೮೮ ಜೆಡ್‌ಪಿಎ ೯೦ ರಲ್ಲಿ ಜಿಲ್ಲಾ ಪರಿಷತ್ತುಗಳಲ್ಲಿ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ನೌಕರರ ವರ್ಗಾವಣೆಗಳನ್ನು ಹೇಗೆ ಮಾಡಬೇಕೆಂಬ ವಿಚಾರದ ಬಗ್ಗೆ ಮಾರ್ಗಸೂಚಿಗಳನ್ನು ಹೇಳಿರುತ್ತದೆ. ಈ ಮಾರ್ಗ ಸೂಚಿಗಳ ಅನ್ವಯ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆ

ಮಾಡುವ ಅಧಿಕಾರವು ಶಿಕ್ಷಣ ಇಲಾಖೆಗೆ ಸೇರಿರುತ್ತದೆ. ಶಿಕ್ಷಣ ಸಚಿವಾಲಯವು ವರ್ಗಾವಣೆಗಳನ್ನು ದಿನಾಂಕ ೨೬ನೇ ಮೇ ೧೯೯೦ ರೊಳಗೆ ಮಾಡಿ ಮುಗಿಸತಕ್ಕದ್ದೆಂದು ಎಲ್ಲಾ ಜಿಲ್ಲಾ ಪರಿಷತ್ತುಗಳ ಮುಖ್ಯ ಕಾರ್ಯದರ್ಶಿಗಳಿಗೆ ಹಾಗೂ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಉಪನಿರ್ದೇಶಕರಿಗೆ ಟೆಲಿಕ್ಸ್ ಸಂದೇಶ ಕಳುಹಿಸಿದೆ. ಈ ಪ್ರಕಾರ ಹಾಸನ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಉಪನಿರ್ದೇಶಕರು ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆಗಳನ್ನು ದಿನಾಂಕ ೨೬ನೇ ಮೇ ೧೯೯೦ಕ್ಕೆ ಅಂತ್ಯಗೊಳ್ಳುವಂತೆ ಮಾಡಿರುತ್ತಾರೆ.

ಪ್ರಾಥಮಿಕ ಶಾಲಾ ಶಿಕ್ಷಕರನ್ನು ವರ್ಗಾವಣೆ ಮಾಡುವ ಅಧಿಕಾರ ಜಿಲ್ಲಾ ಸಾರ್ವಜನಿಕ ಶಿಕ್ಷಣ ಉಪನಿರ್ದೇಶಕರಿಗೆ ಇರುತ್ತದೆ. ದಿನಾಂಕ ೨೯ನೇ ಮಾರ್ಚ್ ೧೯೯೦ ರಂದು ಸರ್ಕಾರವು ಸಾರ್ವತ್ರಿಕ ವರ್ಗಾವಣೆಗಳಿಗೆ ಸಂಬಂಧಪಟ್ಟಂತೆ ಮಾರ್ಗಸೂಚಿಗಳನ್ನು ಹೊರಡಿಸಿರುತ್ತದೆ. ಈ ಮಾರ್ಗ ಸೂಚಿಗಳ ಅನ್ವಯ ಎಲ್ಲಾ ವರ್ಗಾವಣೆಗಳನ್ನು ಸಂಬಂಧಪಟ್ಟ ವರ್ಗಾವಣೆ ಪ್ರಾಧಿಕಾರವೇ ಮಾಡ ತಕ್ಕದ್ದು. ಈ ಅಧಿಕಾರವನ್ನು ವರ್ಗಾವಣೆ ಪ್ರಾಧಿಕಾರಕ್ಕೆ ಮೇಲ್ಪಟ್ಟ ಅಧಿಕಾರಿ ಅಥವಾ ಪ್ರಾಧಿಕಾರವು ತಾನೇ ಚಲಾಯಿಸಲು ಬರುವುದಿಲ್ಲ. ಅಲ್ಲದೆ, ವರ್ಗಾವಣೆ ಮಾಡುವ ಪ್ರಾಧಿಕಾರಗಳು ಸರ್ಕಾರವು ಕಾಲಕಾಲಕ್ಕೆ ನೀಡುವ ಸೂಚನೆ ಅಥವಾ ನಿರ್ದೇಶನಗಳನ್ನು ಅನುಷ್ಠಾನಗೊಳಿಸತಕ್ಕದ್ದೆಂದು ಸರ್ಕಾರವು ನಿರ್ದೇಶನ ನೀಡಿರುತ್ತದೆ. ಈ ಅಂಶವನ್ನು ಸರ್ಕಾರವು ತನ್ನ ಆದೇಶ ಸಂಖ್ಯೆ ಆರ್‌ಡಿಪಿ ೯೦ ಜಡ್‌ಪಿಎ ೯೦, ದಿನಾಂಕ ೨೬ನೇ ಜೂನ್ ೧೯೯೦ ರಲ್ಲಿ ಪುನರುಚ್ಚರಿಸಿರುತ್ತದೆ. ಈ ಸರ್ಕಾರಿ ಆದೇಶದ ಪ್ರಕಾರ ವರ್ಗ ಮಾಡುವ ಅಧಿಕಾರವನ್ನು ಸಂಬಂಧಪಟ್ಟ ವರ್ಗಾವಣೆ ಪ್ರಾಧಿಕಾರಿಗಳು ಅಥವಾ ಅಧಿಕಾರಿಗಳೇ ಚಲಾಯಿಸಬಹುದಾಗಿದೆ ಹಾಗೂ ಆ ರೀತಿ ಮಾಡಿದ ವರ್ಗಾವಣೆಗಳನ್ನು ಅನುಷ್ಠಾನ ಗೊಳಿಸಬೇಕಾಗಿದೆ. ಸಾರ್ವಜನಿಕ ಶಿಕ್ಷಣ ಉಪನಿರ್ದೇಶಕರು ಮಾಡಿರುವ ವರ್ಗಾವಣೆಗಳನ್ನು ತಡೆ ಹಿಡಿಯುವ ಅಧಿಕಾರವು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ಇರುವುದಿಲ್ಲ. ಆದುದರಿಂದ, ಉಪನಿರ್ದೇಶಕರು ಈಗಾಗಲೇ ಹೊರಡಿಸಿರುವ ವರ್ಗಾವಣೆ ಆದೇಶಗಳನ್ನು ಅನುಷ್ಠಾನಗೊಳಿಸಬಹುದಾಗಿದೆ. ಈ ವಿಷಯವಾಗಿ ಎಲ್ಲಾ ಜಿಲ್ಲಾ ಮುಖ್ಯ ಕಾರ್ಯದರ್ಶಿಗಳಿಗೆ ಮತ್ತು ಉಪನಿರ್ದೇಶಕರಿಗೆ ಸೂಕ್ತ ಮಾರ್ಗದರ್ಶನ ದಿನಾಂಕ ೨೮ನೇ ಜೂನ್ ೧೯೯೦ ರಂದು ನೀಡಲಾಗಿದೆ. ಹಾಗೂ ಮತ್ತೊಮ್ಮೆ ಮುಖ್ಯ ಕಾರ್ಯದರ್ಶಿ, ಹಾಸನ ಜಿಲ್ಲಾ ಪರಿಷತ್ತು, ಇವರಿಗೆ ಸರ್ಕಾರಿ ಆಜ್ಞೆಗಳನ್ನು ಪಾಲಿಸಲು ತಕ್ಷಣ ಕ್ರಮ ಕೈಗೊಂಡು ವರದಿ ಮಾಡಲು ತಿಳಿಸಲಾಗಿದೆ. ಇದನ್ನು ಅನುಷ್ಠಾನಗೊಳಿಸಲು ೭ನೇ ಜುಲೈ ೧೯೯೦ರ ವರೆಗೆ ಅವಧಿ ಕೊಡಲಾಗಿದೆ. ಇದನ್ನು ಮೀರಿದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ವೈ–ಳಿಗೆ ಪಿ.ಎಂ.

† ಶ್ರೀ ಕೆ. ಹೆಚ್. ಹನುಮೇಗೌಡ. – ಮಾನ್ಯ ಉಪಾಧ್ಯಕ್ಷರೆ, ನಾನು ಹಾಸನದಿಂದ ನಿನ್ನೆ ಬಂದೆ. ನಿನ್ನೆವರೆಗೆ ಉಪಾಧ್ಯಾಯರುಗಳ ಟ್ರಾನ್ಸ್‌ಫರ್‌ಗೆ ಅವಕಾಶ ಕೊಟ್ಟಿಲ್ಲ. ಆಲ್ಲಿನ ಅಧ್ಯಕ್ಷರು ಹೇಳುತ್ತಾರಂತೆ, ನನ್ನನ್ನು ಕೇಳದೆ ಯಾರು ವರ್ಗ ಮಾಡಿದರೂ ನಾನು ತೆಗೆದುಕೊಳ್ಳುವುದಿಲ್ಲ ಹೋಗಿರಿ ಎಂದು. ಸುಮಾರು ಒಂದು ತಿಂಗಳಾಗಿದೆ. ಇದ್ದ ಕಡೆ ರಿಲೀವ್ ಆಗಿದ್ದಾರೆ, ಬೇರೆ ಕಡೆ ಜ್ಯೂಟಿ ರಿಪೋರ್ಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡುತ್ತಾ ಇಲ್ಲ. ಈ ಬಗ್ಗೆ ಚೀಫ್ ಸೆಕ್ರೆಟರಿ ರವರಿಗೆ ಆದೇಶ ಕೊಟ್ಟಿದೆ ಎಂದು ಮಾನ್ಯ ಸಚಿವರು ಹೇಳುತ್ತಾರೆ. ಚೀಫ್ ಸೆಕ್ರೆಟರಿ ಎನ್ನುವವರು ಸರ್ಕಾರದ ಅಧೀನವೋ ಅಥವಾ ಜಿಲ್ಲಾ ಪರಿಷತ್ತಿನ ಅಧೀನವೋ? ಅವರೆಲ್ಲ ಸೀನಿಯರ್ ಆಫೀಸರ್ಸ್, ಈ ರೀತಿ ಅನಾಹುತವಾಗಿರುವುದನ್ನು ನೋಡಿಕೊಂಡು ಕುಳಿತುಕೊಂಡಿದ್ದಾರಲ್ಲ, ಇದಕ್ಕೆ ಹೊಣೆಯಾರು, ಜವಾಬ್ದಾರಿ ಯಾರು. ಸುಮಾರು ೧೨೫ ಶಾಲೆಗಳಲ್ಲಿ ಸಿಂಗಲ್ ಟೀಚರ್ಸ್ ಇರಬಹುದು ಅಥವಾ ಒಬ್ಬರೂ ಟೀಚರ್ಸ್ ಇಲ್ಲ. ಸಿಂಗಲ್ ಟೀಚರ್ ಶಾಲೆಗಳಲ್ಲಿ ಟೀಚರ್ಸ್ ಇಲ್ಲ. ಡಿ.ಡಿ.ಪಿ.ಐ ಅವರು ವರ್ಗ ಮಾಡಿದ್ದಾರೆ. ಶಾಲೆಗಳ ಬಾಗಿಲು ತೆಗೆದು ಒಂದು ತಿಂಗಳ ಮೇಲಾಗಿದೆ. ಆಲ್ಲಿಗೆ ಉಪಾಧ್ಯಾಯರುಗಳು ಹೋಗುವ ಹಾಗಿಲ್ಲ. ಹಾಗಾದರೆ ಮಕ್ಕಳ ವಿದ್ಯಾಭ್ಯಾಸದ ಗತಿಯೇನು? ಮಾನ್ಯ ಸಚಿವರು ೭ನೇ ಜುಲೈ ೧೯೯೦ ರಂದು ಪುನಃ ಆದೇಶ ಕೊಟ್ಟಾಗಿದೆ ಎಂದು ಹೇಳುತ್ತಾರೆ. ಯಾವ ಆದೇಶ ಕೊಟ್ಟರೂ ಇದುವರೆಗೆ ಅವರು ಜಗ್ಗಿಲ್ಲ. ಆ ಉಪಾಧ್ಯಾಯರುಗಳನ್ನು ಡ್ಯೂಟಿಗೆ ತೆಗೆದುಕೊಂಡಿಲ್ಲ. ಅವರು ಬೀದಿ ಬೀದಿ ಅಲೆಯುತ್ತಾ ಇದ್ದಾರೆ. ಸುಮಾರು ೧೨೫ ಶಾಲೆಗಳಲ್ಲಿ

† ಈಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಉಪಾಧ್ಯಾಯರಿಲ್ಲದೆ ಆ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿದೆ. ಈ ವಿಚಾರದಲ್ಲಿ ಸರ್ಕಾರದಿಂದ ಈ ಆದೇಶ ಹೋದರೂ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳದೇ ಹೋದರೆ, ಮುಂದಿನ ಕ್ರಮ ಏನು? ಜಿಲ್ಲಾ ಪರಿಷತ್ ಚೀಫ್ ಸೆಕ್ರೆಟರಿಯವರು ಅಧ್ಯಕ್ಷರು ಹೇಳಿದಹಾಗೆ ಕೇಳಬೇಕೇ? ನಾನು ಮೊನ್ನೆ ಈ ಬಗ್ಗೆ ವಿಚಾರಿಸಿದಾಗ ಅಧ್ಯಕ್ಷರು ಹೇಳಿದ್ದಾರೆ, ನಾನು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಮುಖ್ಯ ಕಾರ್ಯದರ್ಶಿ ಅವರು ಹೇಳಿದ್ದಾರೆಂದು ಬೇರೆ ಉಪಾಧ್ಯಾಯರು ನನಗೆ ಹೇಳಿದರು. ಪರಿಸ್ಥಿತಿ ಈ ರೀತಿ ಇದೆ. ಇದನ್ನು ಯಾವ ರೀತಿ ಬಗೆಹರಿಸುತ್ತೀರಿ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಉಪಾಧ್ಯಕ್ಷರೆ ಸಭೆಯ ಮುಂದೆ ನಾನು ಈ ವಿಷಯವನ್ನು ಇಟ್ಟಿದ್ದೇನೆ. ನಿನ್ನೆ ತಾರೀಖು ೮ ಭಾನುವಾರ, ಇವತ್ತು ವರದಿ ಬಂದಿದೆಯೋ ಏನೋ ಗೊತ್ತಿಲ್ಲ. ಇದರ ಬಗ್ಗೆ ದೊಡ್ಡದಾಗಿ ಪ್ರಾತನಾಡುವುದು ಸರಿಯಲ್ಲ. ಕಾನೂನು ಪ್ರಕಾರ ಮುಖ್ಯ ಕಾರ್ಯದರ್ಶಿಯವರಿಗೆ ಜಾರಿ ಮಾಡಬೇಕೆಂದು ಹೇಳಿದ್ದೇನೆ. ಇವತ್ತು ಟೆಲಿಕ್ಸ್ ಮೆಸೇಜ್ ಕೂಡ ಹೋಗಿದೆ. ಆದೇಶ ಹೋಗಿದೆ. ಕಾದು ನೋಡುತ್ತೇವೆ. ಇಲ್ಲಿ ಜಿಲ್ಲಾ ಪರಿಷತ್ ಅಧ್ಯಕ್ಷರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ನಮ್ಮ ಅಧಿಕಾರಿಗಳ ಮೂಲಕ ನಾವು ಮಾಡಿಸಬೇಕಾಗುತ್ತದೆ, ಅದನ್ನು ಮಾಡಿಸುತ್ತೇವೆ.

ಚಾಮರಾಜ ನಗರಕ್ಕೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಅದಕ್ಕೆ ಮುಂಚೆ ಒಂದು ವಿಚಾರ ಹೇಳಬೇಕಾಗಿದೆ. ನಗರಾಭಿವೃದ್ಧಿ ಸಚಿವರು ಬಂದಿದ್ದಾರೆ. ನೀರಿನ ಪ್ರಶ್ನೆ ಬಗ್ಗೆ ಕೇಳಬೇಕಾಗಿದೆ. ಚಾಮರಾಜ ನಗರದಲ್ಲಿ ಮೊನ್ನೆ ರಥೋತ್ಸವ ನಡೆಯುವಾಗ ಕೂಡ ನೀರು ಸರಬರಾಜು ಇರಲಿಲ್ಲ. ಕಳೆದ ೧೫ ದಿವಸದಿಂದ ಕುಡಿಯುವ ನೀರಿಗೆ ಅಸಾಧಾರಣವಾದ ತೊಂದರೆಯಾಗಿದೆ. ಇದರ ಬಗ್ಗೆ ಸಂಬಂಧಪಟ್ಟ ಸಚಿವರು ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೆ, ಆಗಿಂದಾಗ್ಗೆ ಚಾಮರಾಜ ನಗರದಲ್ಲಿ ನೀರಿನ ತೊಂದರೆ ಬರುತ್ತಲೇ ಇದೆ. ಅಲ್ಲಿ ಖಾಯಂ ವ್ಯವಸ್ಥೆ ಮಾಡುವವರೆಗೆ ತಾವೂ ಕೂಡ ನಮ್ಮನ್ನು ಬಿಡುವುದಿಲ್ಲ. ಕುಡಿಯುವ ನೀರಿನ ಅನುಕೂಲಕ್ಕಾಗಿ ಖಾಯಂ ಆಗಿ ವ್ಯವಸ್ಥೆ ಮಾಡುವುದಕ್ಕೋಸ್ಕರ ಚಾಮರಾಜ ನಗರಕ್ಕೆ ಕುಡಿಯುವ ನೀರಿನ ಯೋಜನೆಗಾಗಿ ಆರೂವರೆ ಕೋಟಿ ರೂಪಾಯಿ ಯೋಜನೆಯನ್ನು ಪಾಂಜೂರು ಮಾಡಿದ್ದೇವೆ. ಶೀಘ್ರಗತಿಯಲ್ಲಿ ಈ ಕೆಲಸ ಮಾಡಲಾಗುವುದು. ಎಲ್ಲಾ ಕಾಲಕ್ಕೂ ಅಲ್ಲಿಗೆ ಖಾಯಂ ಆದ ನೀರಿನ ವ್ಯವಸ್ಥೆ ಮಾಡುತ್ತೇವೆ. ಅಲ್ಲಿಯವರೆಗೆ ಅವರು ಶಾಂತಿ ಮತ್ತು ಸಮಾಧಾನದಿಂದ ಇರಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಈ ಯೋಜನೆ ನನ್ನ ಪ್ರಕಾರ ನಾಳೆ ನಾಡಿದ್ದು ಮುಗಿಯುವುದಿಲ್ಲ. ಮುಂದಿನ ತಿಂಗಳು ಮಾನ್ಯ ಮುಖ್ಯ ಮಂತ್ರಿಗಳು ಬಂದು ಶಿಲಾನ್ಯಾಸ ಮಾಡುತ್ತಾರೆ. ಆದ್ದರಿಂದ ತಾತ್ಕಾಲಿಕವಾಗಿ ಏನಾದರೂ ಪರಿಹಾರ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಚಾಮರಾಜನಗರದ ನಾಗರೀಕರಿಗೆ ಕುಡಿಯುವ ನೀರಿಗೆ ಯಾವುದೇ ರೀತಿಯ ಅಡಚಣೆ ಆಗದಂತೆ ನೋಡಿಕೊಳ್ಳುವ ಪೂರ್ಣ ಭರವಸೆಯನ್ನು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ರಾಷ್ಟ್ರೀಯ ಥರ್ಮಲ್ ವಿದ್ಯುತ್ ನಿಗಮದ ಅಧಿಕಾರಿಗಳು ಮುಷ್ಕರ ಹೂಡಲು ನೋಟೀಸ್ ಕೊಟ್ಟಿರುವ ಬಗ್ಗೆ

ಶ್ರೀ ವಿ. ಎಸ್. ಕೌಜಲಗಿ.—ಮಾನ್ಯ ಉಪಾಧ್ಯಕ್ಷರೇ, ಇವತ್ತು ಮುಂಜಾನೆ ಪ್ರಜಾವಾಣಿಯಲ್ಲಿ ತಾವು ಓದಿರಬಹುದು. ಈ ಬಗ್ಗೆ ನಾನು ಗಮನ ಸೆಳೆಯುವ ಸೂಚನೆ ಕೂಡ ಕೊಟ್ಟಿದ್ದೇನೆ.

ಉಪಾಧ್ಯಕ್ಷರು.—ಗಮನ ಸೆಳೆಯುವ ಸೂಚನೆ ಯಾವುದೂ ಇಲ್ಲ.

ಶ್ರೀ ವಿ. ಎಸ್. ಕೌಜಲಗಿ.—ಮುಂಜಾನೆ ಕಳಿಸಿದ್ದೇನೆ. ಅಧ್ಯಕ್ಷರ ಅನುಮತಿ ತೆಗೆದುಕೊಂಡಿದ್ದೇನೆ. ರಾಷ್ಟ್ರೀಯ ಥರ್ಮಲ್ ವಿದ್ಯುತ್ ನಿಗಮದ ಅಧಿಕಾರಿಗಳು ಜುಲೈ ೧೦ ರಿಂದ ಮುಷ್ಕರ ಹೂಡುವುದಾಗಿ ನೋಟೀಸ್ ಕೊಟ್ಟಿದ್ದಾರೆ.